ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

೧೧.೩೦ ಎಎಂ

ಅಧ್ಯಕ್ಷರು:- ಲಕ್ಕಣ್ಣನವರೆ, ತಮ್ಮ ಪ್ರಶ್ನೆಗೆ ಒಂದು ವಾರ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕೆ. ಲಕ್ಕಣ್ಣ:- ಯಾವಾಗ ತೆಗೆದುಕೊಳ್ಳುತ್ತೀರಾ ಸ್ವಾಮಿ?

ಅಧ್ಯಕ್ಷರು:- ಒಂದು ವಾರ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ:- ಈ ಸದನದ ಸಮಿತಿ ರಾಜ್ಯದ ಜನತೆಗಾಗಿ ಮಾಡಲಾಗಿರೆ.

ವಿಷಯ:- ರಾಜ್ಯದಲ್ಲಿನ ಪಶುವೈದ್ಯ ಆಸ್ಪತ್ರೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- ೨೨(೩)
ಶ್ರೀ ಬಿ.ಎಂ. ಇನಿನಬ್ಬ (ಉಳ್ಳಾಲ)
ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿ ೧೯೯೧-೯೨ನೇ ಡಿಸೆಂಬರ್ ಅಖೈರುವರೆಗೆ ಹೊಸದಾಗಿ ಎಷ್ಟು ಪಶು ಸಂಗೋಪನಾ ಆಸ್ಪತ್ರೆಗಳನ್ನು ಮುಂಜೂರು ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಆ) ಮಂಜೂರು ಆಗಿದ್ದಲ್ಲಿ ಆ ಕೆಲಸ ಯಾವಾಗ ಪೂರ್ಣಗೊಳಿಸಲಾಗುವುದು?

ಇ) ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಸರ್ಕಾರವು ಆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ.ಎನ್. ನಾಗೇಗೌಡ
(ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು)

ಇಲ್ಲಿ ಯವರೆಗೆ ೧೮೩೫ ಪಶುವೈದ್ಯ ಸಂಸ್ಥೆಗಳು

೧.ಆಸ್ಪತ್ರೆ - ೧೪೯
೨.ಪಶು ಚಿಕಿತ್ಸಾಲಯ - ೫೨೧
೩.ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ - ೧೫೫

೧೯೯೨-೯೩ರಲ್ಲಿ ೧೯೪ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲಾಗುವುದು.

೧೯೪ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ತೆರೆಯಲು ಸ್ಥಳ ಕಾರ್ಯ ಪರಿಶೀಲನೆಯಲ್ಲಿದೆ.

ಬಂದಿದೆ.

ಅದನ್ನು ಬೇಗ ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯ ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಗಳಲ್ಲಿ ರಾಜ್ಯದಲ್ಲಿ ಇರುವ
ಪಶುವೈದ್ಯಕೀಯ ಸಂಸ್ಥೆಗಳು

ಕ್ರ.ಸಂ.	ಜಿಲ್ಲೆಯ ಹೆಸರು	ಪಶುವೈದ್ಯ ಕೀಯ ಆಸ್ಪತ್ರೆ	ಪಶು ಚಿಕಿ ತ್ಸಾಲಯ	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	ಸಂಚಾರಿ ಪಶುಚಿಕಿ ತ್ಸಾಲಯ	ಕೃತಕ ಗರ್ಭಧಾರಣಾ ಕೇಂದ್ರ	ಒಟ್ಟು
೧.	ಬೆಂಗಳೂರು ನಗರ	೬	೨೮	೨೨	೩	೪೨	೧೦೧
೨	ಬೆಂಗಳೂರು ಗ್ರಾಮಾಂತರ	೬	೨೭	೪೫	೪	೫೪	೧೪೨
೩.	ಚಿತ್ರದುರ್ಗ	೯	೨೭	೭೪	೯	೨೪	೧೫೧
೪.	ಕೋಲಾರ	೧೩	೨೪	೪೬	೧೧	೫೯	೧೫೩
೫.	ತುಮಕೂರು	೧೦	೩೯	೭೦	೧೦	೨೦	೧೪೯
೬.	ಶಿವಮೊಗ್ಗ	೧೦	೩೨	೪೧	೯	೨೭	೧೫೯
೭.	ಮೈಸೂರು	೧೩	೩೧	೭೬	೧೧	೪೧	೧೭೨
೮.	ಹಾಸನ	೪	೨೭	೫೪	೪	೧೯	೧೨೦
೯.	ಚಿಕ್ಕಮಗಳೂರು	೭	೨೬	೪೧	೭	೧೨	೯೩
೧೦.	ದಕ್ಷಿಣ ಕನ್ನಡ	೯	೧೬	೭೨	೪	೨೧	೧೨೬

೧	೨	೩	೪	೫	೬	೭	೮
೧೧.	ಕೊಡಗು	೫	೧೫	೨೦	೩	೨೦	೬೩
೧೨.	ಮಂಡ್ಯ	೭	೩೯	೨೭	೭	೧೯	೯೨
೧೩.	ಗುಲ್ಬರ್ಗಾ	೧೦	೨೪	೯೧	೧೦	೨೬	೧೬೫
೧೪.	ಬಳ್ಳಾರಿ	೮	೨೧	೩೫	೮	೧೪	೨೬೬
೧೫.	ಬೀದರ್	೫	೧೭	೬೩	೫	೧೩	೭೩
೧೬.	ರಾಯಚೂರು	೯	೧೯	೪೬	೯	೧೦	೯೩
೧೭.	ಬೆಳಗಾಂ	೧೧	೩೧	೮೯	೧೦	೩೮	೧೭೯
೧೮.	ಬಿಜಾಪುರ	೧೧	೨೫	೭೫	೮	೧೭	೧೩೬
೧೯.	ಧಾರವಾಡ	೧೯	೩೮	೭೨	೧೭	೮೯	೨೪೦
೨೦.	ಉತ್ತರ ಕನ್ನಡ	೧೧	೧೧	೪೩	೧೨	೩೭	೧೧೪
	ಒಟ್ಟು	೧೪೯	೫೨೧	೧೧೨೫	೧೭೩	೬೧೬	೨೬೧೪

ಶ್ರೀ ಬಿ.ಎಂ. ಇದಿನಬ್ಬ:- ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಉತ್ತರ ಕೊಡುತ್ತಾ ರಾಜ್ಯದಲ್ಲಿ ೧೪೯ ಆಸ್ಪತ್ರೆಗಳು, ೫೨೧ ಪಶು ಚಿಕಿತ್ಸಾಲಯಗಳು ೧೧೨೫ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನೂ ಮಾಡಿದ್ದೇವೆಂದು ಹೇಳಿದ್ದಾರೆ. ರಾಜ್ಯದಲ್ಲಿರತಕ್ಕ ಎಲ್ಲಾ ಚಿಕಿತ್ಸಾಲಯಗಳು ಬಿದ್ದು ಹೋಗಿದಿವೆ. ಆಸ್ಪತ್ರೆಗಳಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ, ಮತ್ತು ಸಾಕಷ್ಟು ಡಾಕ್ಟರುಗಳಿಲ್ಲ ಮತ್ತು ಒಳ್ಳೆಯ ಚಿಕಿತ್ಸೆ ನಡೆಯುತ್ತಾ ಇಲ್ಲ ಅಂತ ಹೆಚ್ಚಾಗಿ ತಿಳಿದು ಬಂದಿದೆ. ಆದುದರಿಂದ ಈಗಿನ ನಮ್ಮ ಮಂತ್ರಿಗಳು ಪಶು ಚಿಕಿತ್ಸಾಲಯಗಳು ಪ್ರಗತಿದಾಯಕವಾಗುವ ಹಾಗೆ ನೋಡಿಕೊಳ್ಳುತ್ತಾರೆಯೇ? ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಪಶುವೈದ್ಯ ಶಾಲೆಗಳಲ್ಲಿ ಚಿಕಿತ್ಸೆ ಇಲ್ಲದೆ ಬಂದಿರತಕ್ಕ ಗ್ರಾಹಕರು ವಾಪಸ್ಸು ಹೋಗಿದ್ದಾರೆ. ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಕೆ.ಎನ್ ನಾಗೇಗೌಡ:- ಸನ್ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ೧೪೩೫ ಪಶುವೈದ್ಯಶಾಲೆಗಳು ಇವೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಈಗಾಗಲೇ ನಾವು೧೦-೧೫ ಆಸ್ಪತ್ರೆಗಳಿಗೆ ಎಲ್ಲಾ ಅನುಭವದಲ್ಲಿ ಅನಿರೀಕ್ಷಿತವಾಗಿ ಭೇಟಿ ಕೊಟ್ಟು ಅವುಗಳು ಸರಿಯಾಗಿ ನಡೆಯುತ್ತಿಲ್ಲ ಅನ್ನತಕ್ಕಂತದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಪಶುವೈದ್ಯಶಾಲೆಗಳು ಸರಿಯಾಗಿ ನಡೆಯುತಿದ್ದರೆ ನಮ್ಮ ರಾಜ್ಯದಲ್ಲಿರತಕ್ಕ ೪ ಕೋಟಿ ೧೦ ಲಕ್ಷ ಜಾನುವಾರುಗಳಿಗೆ ಒಳ್ಳೆಯ ಚಿಕಿತ್ಸೆ ಸಿಗುತ್ತಿತ್ತು. ಆದರೆ, ಇರತಕ್ಕಂತ ಆಸ್ಪತ್ರೆಗಳು ಬಹಳ ಕಡಿಮೆ. ಔಷಧಿಗಳು ಬಹಳ ಕಡಿಮೆ, ಇದೆ ಔಷಧಿ ಎರಡು ರೂಪಾಯಿಲ್ಲಿ ಕಡಿಮೆ ಇದೆ ಹೋದವರ್ಷ ಔಷಧಿಗಾಗಿ ೨ ಕೋಟಿ ೭೬ ಲಕ್ಷ ರೂಪಾಯಿ ಇಟ್ಟಿದ್ದರು. ೪ ಕೋಟಿ ೧೦ ಲಕ್ಷ ಜಾನುವಾರುಗಳಿಗೆ ೨.೭೬ ಲಕ್ಷ ಇಟ್ಟಿದ್ದರು. ಇದರಲ್ಲಿಯೂ ಸರಿಯಾದ ರೀತಿಯಲ್ಲಿ ಖರೀದಿ ಆಗದೆ ಕಲಬೆರಕೆಯ ಔಷಧಗಳನ್ನು ಖರೀದಿ ಮಾಡಲಾಗಿದೆ. ಅನೇಕ ಕಡೆ ಔಷಧಿಗಳು ಸಾವತ್ತಿಯಾಗಿವೆ. ಇದೆಲ್ಲಾ ನೋಡಿದ ಮೇಲೆ ನಮಗೂ ನೋವಾಗಿದೆ. ಜಿಲ್ಲೆ ಹಿಡಿದಿರುವುದನ್ನು ತೆಗೆಯುವುದಕ್ಕೆ ಎಲ್ಲ ಕ್ರಮ ಕೈಗೊಳ್ಳಲಾಗುವುದು. ಔಷಧಿಗಳನ್ನು ೯೩-೯೪ರಲ್ಲಿ ಜಾಸ್ತಿ ಮಾಡಬೇಕು. ಎರಡೂವರೆ ಕೋಟಿ ಆಗುವುದಿಲ್ಲ. ೫ ಕೋಟಿ ಕೊಡಬೇಕ ಗುತ್ತದೆಂದು ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಕೊಟ್ಟಿದ್ದೇವೆ. ಮುಂದೆ ಆಸ್ಪತ್ರೆಗಳನ್ನು ಸುಧಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ:- ಒಳ್ಳೆಯ ವಿಚಾರಗಳನ್ನೂ ಮಂತ್ರಿಗಳು ನಮ್ಮ ಉತ್ತರದಲ್ಲಿ ಹೇಳಿದ್ದಕ್ಕೆ ಸಂತೋಷ. ಏಕೆಂದರೆ ಇರತಕ್ಕ ಸತ್ಯವನ್ನು ಹೇಳಬೇಕಾಗಿದೆ. ರಾಜ್ಯದಲ್ಲಿರತಕ್ಕ ಪಶುವೈದ್ಯ ಶಾಲೆಗಳಿಗೆ ಡಾಕ್ಟರ್‌ಗಳು ಸರಿಯಾಗಿ ಬರುತ್ತಿಲ್ಲ, ಕೆಲವುಕಡೆ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಅರ್ಧ ಅರ್ಧ ತಾಸು ಕೂಡ ಕೆಲಸ ಮಾಡುತ್ತಾ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಆಸ್ಪತ್ರೆಗಳಿಗೆ ಡಾಕ್ಟರ್‌ಗಳು ಬರುವುದಿಲ್ಲ. ಅಲ್ಲಿ ಒಳ್ಳೆಯ ಚಿಕಿತ್ಸೆ ಇಲ್ಲ, ಕಲಬೆರಕೆಯ ಔಷಧಿ ಇವೆ. ಇದರಿಂದ ಗ್ರಾಹಕರಿಗೆ ಬಹಳ ತೊಂದರೆ ಆಗುತ್ತಿದೆ. ಆದುದರಿಂದ ಮಂತ್ರಿಗಳು ಔಷಧಿಗೆ ೫೬ ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಡುವಂತೆ ಮಾಡಲು ಆಶ್ವಾಸನೆ ಕೊಡುತ್ತಾರೆಯೇ?

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೇ ಬೆಳಿಗ್ಗೆ ೮.೩೦ ರಿಂದ ಮಧ್ಯಾಹ್ನ ೧೨.೩೦ ರವರೆಗೆ, ಮಧ್ಯಾಹ್ನ ೩.೩೦ ರಿಂದ ಸಂಜೆ ೫ ಗಂಟೆಯವರೆಗೆ ಕೆಲಸ ಮಾಡಬೇಕು. ಈ ರೀತಿ ಕೆಲಸದ ಮೇಲೆ ಇಲ್ಲದ ಮದ್ದೂರಿನಲ್ಲಿರತಕ್ಕ ಒಬ್ಬ ಅಸಿಸ್ಟೆಂಟ್ ಸರ್ಜನ್ ಒಬ್ಬರನ್ನೂ ಅಮಾನತ್‌ನಲ್ಲಿಟ್ಟಿದ್ದೇವೆ. ಜಾಯಿಂಟ್ ಡೈರೆಕ್ಟರ್‌ಗಳು, ಡೆಪ್ಯೂಟಿ ಡೈರೆಕ್ಟರ್‌ಗಳು ತಿಂಗಳಿಗೆ ೧ ಸಾರಿ ಅನಿರೀಕ್ಷಿತ ಬೇಟಿ ನೀಡಬೇಕೆಂದು ಸೂಚಿಸಿದ್ದೇವೆ. ನಾನು ಮಂತ್ರಿಯಾಗಿ ೧೫ ಆಸ್ಪತ್ರೆಗಳಿಗೆ ಅನಿರೀಕ್ಷಿತ ಬೇಟಿ ನೀಡುತ್ತಿದ್ದೇನೆ. ಜಿಲ್ಲಾ ಮಟ್ಟದಲ್ಲಿ ಮತ್ತು ಡಿವಿಷನ್ ಮಟ್ಟದಲ್ಲಿ ವಿಸಿಟಿಂಗ್ ಬೋರ್ಡ್‌ಗಳನ್ನೂ ಸ್ಥಾಪನೆ ಮಾಡುತ್ತಿದ್ದೇವೆ. ಪಶುವೈದ್ಯಶಾಲೆಗಳಲ್ಲಿ

ಪ್ರಾಣಿಗಳಿಗೆ ಸರಿಯಾದ ಔಷಧದ ಸೌಲಭ್ಯ ಮತ್ತಿತರ ಇನ್‌ಫ್ರಾಸ್ಟ್ರಕ್ಚರ್ ಏನೇನೂ ಮಾಡಬೇಕು ಅದನ್ನೆಲ್ಲಾ ಸಮಗ್ರವಾಗಿ ಯೋಜನೆ ಮಾಡಿ ೨-೩ ತಿಂಗಳೊಳಗೆ ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ವಿಷಯ:- ಹಾಸನ ಪಟ್ಟಣದಲ್ಲಿ ಶಾಲೆಗಳಲ್ಲಿ ತರಗತಿಗಳ ಕೊಠಡಿಗಳ ಸ್ಥಳಾಭಾವ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೬:- (೫೪೦)
ಶ್ರೀ ಕೆ.ಪಿಚ್. ಹನುನೇಗೌಡ (ಹಾಸನ)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಪಟ್ಟಣದಲ್ಲಿರುವ ಯಾವ ಯಾವ ಪ್ರೈಮರಿ ಮತ್ತು ಮಿಡಲ್ ಸ್ಕೂಲ್‌ಗಳಿಗೆ ಸ್ಥಳಾಭಾವವಿದ್ದು ತರಗತಿಗಳನ್ನು ನಡೆಸಲು ತೊಂದರೆಯಾಗಿರುವುದು (ವಿವರವನ್ನು ಒದಗಿಸುವುದು)

ಆ) ಈ ರೀತಿ ಸ್ಥಳಾಭಾವವಿರುವ ಯಾವ· ಯಾವ ಶಾಲೆಗಳಿಗೆ ಸ್ಥಳಾಭಾವವನ್ನು ಹೋಗಲಾಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ. (ವಿವರ ಕೊಡಿ)

ಡಾ. ಹೆಗ್ಗಪ್ಪ ಡಿ. ಲನಮಾನಿ
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

೭ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇದೆ. ಪಟ್ಟಿ ಲಗತ್ತಿಸಿದೆ. ಮೇಲಿನ ೭ ಶಾಲೆಗಳಲ್ಲಿನ ಸ್ಥಳಾಭಾವ ಹೋಗಲಾಡಿಸಲು ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಹಾಸನ ಪಟ್ಟಣದಲ್ಲಿ ಶಾಲಾ ಕೊಠಡಿಗಳ ಕೊರತೆ ಇರುವ ಶಾಲೆಗಳ ಪಟ್ಟಿ

ಕ್ರ.ಸಂ.	ಶಾಲೆಗಳ ವಿವರ	ಕೊಠಡಿಗಳು
೧	ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲ ಜುಮ್ಮಾ ಮಸೀದಿ, ಹಾಸನ	೨ ಕೊಠಡಿಗಳು
೨	ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಕೆ.ಆರ್.ಪುರಂ	೩ ಕೊಠಡಿಗಳು
೩	ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಅಮೀರ್ ಮೊಹಲ್ಲ	೨ ಕೊಠಡಿಗಳು
೪	ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಮಿರಜಾಮೊಹಲ್ಲ	೨ ಕೊಠಡಿಗಳು
೫	ಸರ್ಕಾರಿ ಉರ್ದು ಪೂರ್ವ ಪ್ರಾಥಮಿಕ ಶಾಲೆ, ಮಿರಜಾಮೊಹಲ್ಲ	೧ ಕೊಠಡಿ
೬	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹೊಸಅಗ್ರಹಾರ	೫ ಕೊಠಡಿಗಳು
೭	ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅರಳೇಪೇಟೆ	೫ ಕೊಠಡಿಗಳು